(ಸದನವು ಬೆಳಿಗ್ಗೆ 10 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಬಿ.ಜೆ.ಪಿ. ಶಾಸಕರು ಕಪ್ಪು ಪಟ್ಟಿಯನ್ನು ಧರಿಸಿ ಸದನಕ್ಕೆ ಹಾಜರಾಗಿದ್ದರು)

ಅಧ್ಯಕ್ಷರು:– ಒಂದು ಪ್ರಕಟಣೆ ಇದೆ.

ಪ್ರಕಟಣೆ

ಹುಟ್ಟುಹಬ್ಬದ ಶುಭಾಷಯಗಳು: ಈ ದಿನ ದಿನಾಂಕ:18.07.2014 ರಂದು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸದನದ ಸದಸ್ಯರಾಗಿರುವ ಶ್ರೀ ಸಿ.ಟಿ.ರವಿಯವರು ಮತ್ತು ಶ್ರೀ ಫಿರೋಜ್ ನೂರುದ್ದೀನ್ ಸೇಠ್ ಇವರುಗಳಿಗೆ ಜನ್ಮ ದಿನದ ಶುಭಾಷಯಗಳು, ಈ ಸಂದರ್ಭದಲ್ಲಿ ಭಗವಂತನು ಇವರುಗಳಿಗೆ ಆಯುರಾರೋಗ್ಯವನ್ನು ದಯಪಾಲಿಸಲೆಂದು ಹಾರೈಸುತ್ತೇನೆ.

ವಿಷಯ:– ನಿಯಮ 60ರ ಅಡಿ ರಾಜ್ಯದಲ್ಲಿ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರದ ಬಗ್ಗೆ.

1. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ವೈ.ಎಸ್.ವಿ.ದತ್ತಾ:– ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆ ತಂದಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ತಮ್ಮ ಸ್ಥಳದಿಂದ):– ಮಾನ್ಯ ಅಧ್ಯಕ್ಷರೆ, ಅವಿರತವಾಗಿ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ನಡೆಯುತ್ತಿದೆ. ದಯಮಾಡಿ ಸರ್ಕಾರ ಈ ಬಗ್ಗೆ ಕಠಿಣವಾದಂಥ ತೀರ್ಮಾನ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು:– ಈಗ ಮಾನ್ಯ ಸದಸ್ಯರೆ ತಾವು ಕಳುಹಿಸಿರುವಂಥ ನಿಲುವಳಿ ಸೂಚನೆಯನ್ನು ನೋಡಿದ್ದೇನೆ. ಅದು ಬಿ.ಜೆ.ಪಿ.ಪಕ್ಷದಿಂದಲೂ ಬಂದಿದೆ ಮತ್ತು ಜೆಡಿಎಸ್ ಪಕ್ಷದಿಂದಲೂ ಬಂದಿದೆ. ಇದು ನಿಲುವಳಿ